ಕೃಷಿ ಇಲಾಖೆಯಲ್ಲಿ ಮುಂಬಡ್ತಿ ನೀಡಲಾದ ವಿವರ

3479 - ಶ್ರೀ ಗೋಪಾಲ ಮುಕುಂದ ಕಾನಡೆ (ಸಿರಸಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷಿ ಇಲಾಖೆಯಲ್ಲಿ ಶೇ.18ರಂತೆ ಜೂನಿಯರ್ ಕ್ಲಾಸಿನಿಂದ ಸೀನಿಯರ್ ಕ್ಲಾಸಿಗೆ ಎಷ್ಟು ಜನರಿಗೆ ಈವರೆಗೆ ಬಡ್ತಿ ನೀಡಲಾಗಿದೆ. (ಹೆಸರು ಹಾಗೂ ವಿವರ ಒದಗಿಸುವುದು)

ಆ) ಅವರಲ್ಲಿ ಎಷ್ಟು ಮಂದಿ ಹರಿಜನರು ಗಿರಿಜನರು ಇದ್ದಾರೆ(ಹೆಸರು ಹಾಗೂ ವಿವರ ನೀಡುವುದು)

ಇ) ಈ ಕುರಿತು ಸರ್ಕಾರದಿಂದ ಕೃಷಿ ಇಲಾಖೆಗೆ ಸುತ್ತೋಲೆ ಏನಾದರೂ ಬಂದಿರುವುದೇ?

ಈ) ಬಂದಿದ್ದಲ್ಲಿ ಈ ಕುರಿತು ಇಲಾಖೆಯಲ್ಲಿ ತೆಗೆದುಕೊಂಡ ಕ್ರಮ ಏನು?

ಉ) ಈ ಇಲಾಖೆಯಲ್ಲಿ ಖಾಲಿ ಇದ್ದ ಹುದ್ದೆಗಳ ಸಂಖ್ಯೆ ಎಷ್ಟು?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು) :

ಅ) ಹಾಲಿ ಇರುವ ನಿಯಮಗಳ ಅನ್ವಯ ಶೇ.18ರಂತೆ ಜೂನಿಯರ್ ಕ್ಲಾಸ್ ನಿಂದ ಸೀನಿಯರ್ ಕ್ಲಾಸ್ ಹುದ್ದೆಗಳಿಗೆ ಬಡ್ತಿ ನೀಡಲು ಅವಕಾಶವಿರುವುದಿಲ್ಲ. ಆದುದರಿಂದ ಶೇ 18 ರಂತೆ ಜೂನಿಯರ್ ಕ್ಲಾಸ್ ನಿಂದ ಸೀನಿಯರ್ ಕ್ಲಾಸ್‌ಗೆ ಬಡ್ತಿ ನೀಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಹಾಲಿ ಇಲಾಖೆಯಲ್ಲಿ 1972 ಹುದ್ದೆಗಳು ಖಾಲಿ ಇರುತ್ತದೆ.

ಕೇಂದ್ರ ಸರ್ಕಾರದಿಂದ ಮೀನುಗಾರರ ವಸತಿ ಯೋಜನೆಗೆ ಬಂದ ಹಣ

3482 - ಶ್ರೀ ಎ. ರುಕ್ಕಯ್ಯ ಪೂಜಾರಿ (ವಿಟ್ಲ) : ಮಾನ್ಯ ಮೀನುಗಾರಿಕೆ ಬಂದರು ಮತ್ತು ಒಳನಾಡು ಅಂತರ್ಜಲಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರ ಮೀನುಗಾರಿಕಾ ವಸತಿ ಯೋಜನೆಯನ್ವಯ ರಾಜ್ಯ ಸರ್ಕಾರಕ್ಕೆ 1985-86ನೇ ವರ್ಷದಲ್ಲಿ ಎಷ್ಟು ಹಣ ಕೊಟ್ಟಿರುವರು?

ಆ ಹಣವು ಮೀನುಗಾರರ ವಸತಿಗೆ ಖರ್ಚಾಗದೇ ಇರುವುದು ಸರಿಯೇ?

ಇ) ಹಾಗಾದರೆ ಆ ಹಣವು ಯಾವ ಉದ್ದೇಶಕ್ಕಾಗಿ ಖರ್ಚಾಗಿದೆ ಹಾಗೂ ಅದಕ್ಕೆ ಕಾರಣಗಳೇನು?

ಶ್ರೀ ಎ.ಎಮ್. ಬೆಳ್ಳಿಯಪ್ಪ (ಮೀನುಗಾರಿಕೆ, ಬಂದರು ಮತ್ತು ಒಲನಾಡು ಅಂತರ್ಜಲ ಸಾರಿಗೆ ರಾಜ್ಯ ಮಂತ್ರಿಗಳು) :

ಅ) ಕೇಂದ್ರ ಸರ್ಕಾರ 1985-86ನೇ ಸಾಲಿನಲ್ಲಿ ಮೀನುಗಾರಿಕಾ ವಸತಿ ಯೋಜನೆಯಡಿಯಲ್ಲಿ ಹಣವನ್ನು ಕೊಟ್ಟಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.